**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕೋರ್ಟ್,**
**ಬಸವನ ಬಾಗೇವಾಡಿ.**

ಸಿಸಿ ನಂಃ 2541/2023

ಸಿಡಬ್ಲ್ಯೂ 01 ಪಿಡಬ್ಲ್ಯೂ 01

| | | |
|---|---|---|
| ಸಾಕ್ಷಿದಾರರ ಹೆಸರು | ರಂಗಪ್ಪ ರೊಳ್ಳಿ | |
| ತಂದೆ/ಗಂಡನ ಹೆಸರು | ವಿಠ್ಠಲ ಯಾನೆ ವಿಠ್ಠಪ್ಪ | |
| ವಯಸ್ಸು | 57 | ವರ್ಷ |
| ಉದ್ಯೋಗ | ಪಂಚರ ಅಂಗಡಿಯಲ್ಲಿ ಕೆಲಸ | |
| ವಾಸಸ್ಥಳ | ಮಲಘಾಣ | |

**ಸಾಕ್ಷಿಯನ್ನು ಇಂದು ದಿನಾಂಕಃ 02.06.2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದ**

**1.** ಚಾಸಾ-4 ನನ್ನ ತಮ್ಮನಾಗಬೇಕು. ಸದರಿ ಚಾಸಾ-4 ರವರು ಈಗ ಮೃತಪಟ್ಟಿರುತ್ತಾರೆ. ಚಾಸಾ-5 ರವರು ನನಗೆ ಹೆಂಡತಿಯಾಗಬೇಕು. ಚಾಸಾ-6 ರಿಂದ 9 ರವರ ಪರಿಚಯ ಇರುತ್ತದೆ. 2023 ನೇ ವರ್ಷದಲ್ಲಿ ಬೆಳಿಗ್ಗೆ 11.00 ಗಂಟೆಗೆ ಚಾಸಾ-4 ರವರು ಪಂಚರ ಅಂಗಡಿಯಲ್ಲಿದ್ದಾಗ ಆರೋಪಿತರುಗಳು ನಮ್ಮ ಅಂಗಡಿಗೆ ಬಂದು ಚಾಸಾ-4 ರವರನ್ನು ಅಂಗಡಿಯಿಂದ ಹೊರಗೆ ಎಳೆದುಕೊಂಡು ಬಂದು ಅವರಿಗೆ ಹೊಡೆ ಬಡಿ ಮಾಡಿರುತ್ತಾರೆ ಮತ್ತು ಚಾಸಾ-4 ರವರ ಬಲಗಾಲ ಚಪ್ಪೆಗೆ ಕಲ್ಲು ಒಗೆದಿರುತ್ತಾರೆ. ಸದರಿ ಗಲಾಟೆಯಲ್ಲಿ ಚಾಸಾ-4 ರವರ ಕಾಲು ಮುರಿದಿರುತ್ತದೆ. ನಂತರ ಗಲಾಟೆಯನ್ನು ಚಾಸಾ-6 ರಿಂದ 9 ರವರು ಬಿಡಿಸಿರುತ್ತಾರೆ. ಸದರಿ ಗಲಾಟೆಯಲ್ಲಿ ಆರೋಪಿತರು ಚಾಸಾ-5 ರವರಿಗೆ ಹೊಡೆದಿರುತ್ತಾರೆ ಮತ್ತು ಸದರಿ ಗಲಾಟೆಯಲ್ಲಿ ಚಾಸಾ-5 ರವರ ಬಲಗೈನ ಮಧ್ಯದ ಬೆರಳು ಮುರಿದಿರುತ್ತದೆ.

2. ನಂತರ ನಾನು ಪೋಲಿಸ್ ಠಾಣೆಗೆ ಹೋಗಿ ಆರೋಪಿತರ ವಿರುದ್ಧ ದೂರನ್ನು ನೀಡಿರುತ್ತೇನೆ.

2. ಸಾಕ್ಷಿಯು ಫಿರ್ಯಾದಿಯ ಮೇಲೆ ಇರುವ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು ನಿಪಿ-1 ಎಂದು ಗುರುತಿಸಲಾಯಿತು. ಸಾಕ್ಷಿಯು ಒಂದು ಛಾಯಾಚಿತ್ರದಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿದ್ದು,ಅ ದನ್ನು ನಿಪಿ-2 ಎಂದು ಗುರುತಿಸಲಾಯಿತು. ನಾನು ಆರೋಪಿತರನ್ನು ನೋಡಿದರೆ ಗುರುತಿಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 2 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. 1,3 ರಿಂದ 5 ನೇ ಪ್ರಕರಣವು ಪ್ರತ್ಯೇಕಿಸಲ್ಪಟ್ಟಿದೆ.

3. ಆ ದಿನ ಆರೋಪಿತರು ಚಾಸಾ-4 ಮತ್ತು 5 ರವರಿಗೆ ಹೊಡೆಯಲು ಉಪಯೋಗಿಸಿದ ಬಡಿಗೆಗಳನ್ನು ಮತ್ತು ಕಲ್ಲುಗಳನ್ನು ನೋಡಿದರೆ ಗುರುತಿಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯ ಮುಂದಿರುವ ಮೂರು ಬಡಿಗೆಗಳನ್ನು ಮತ್ತು ಎರಡು ಕಲ್ಲುಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಕ್ರಮವಾಗಿ ಮು.ಮಾ-1 ರಿಂದ 5 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಎಪಿಪಿ ರವರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲು ಎ.ಪಿ.ಪಿ ವಕೀಲರಿಂದ</u>**

1. ದಿಃ 11.7.2023 ರಂದು ಮಧ್ಯಾಹ್ನ 03.00 ಗಂಟೆಗೆ ಆರೋಪಿತರುಗಳು ನಮ್ಮ ಪಂಚರ ಅಂಗಡಿಗೆ ಬಂದು ಚಾಸಾ-4 ಮತ್ತು 5 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ. ಅದೇ ರೀತಿಯಾಗಿ ಆರೋಪಿತರುಗಳು ಚಾಸಾ-4 ಮತ್ತು 5 ರವರಿಗೆ ಪ್ರಾಣ ಬೆದರಿಕೆ ಹಾಕಿರುತ್ತಾರೆ

ಎಂದರೆ ಸರಿ. ಅದೇ ರೀತಿಯಾಗಿ ಜಗಳ ಬಿಡಿಸಲು ಬಂದ ಚಾಸಾ-5 ರವರಿಗೆ 2 ಮತ್ತು 4 ನೇ ಆರೋಪಿತರು ಕೂಡಿ ತೆಕ್ಕೆ ಬಡಿದು ಹಿಡಿದು ಕೈಯಿಂದ ಹೊಡೆದಿರುವಾಗ 3 ನೇ ಆರೋಪಿಯು ಚಾಸಾ-5 ರವರ ಕೈಯನ್ನು ಹಿಡಿದು ಜಗ್ಗಿ ಅವರ ಹೆಣ್ಣು ತನಕ್ಕೆ ಅವಮಾನ ಪಡಿಸಿ ಅವರ ಬಲಗೈಗೆ ಬಲವಾಗಿ ಹೊಡೆದು ಗಾಯ ಪಡಿಸಿರುತ್ತಾನೆ ಎಂದರೆ ಸರಿ.

2. ದಿಃ 17.07.2023 ರಂದು ಬೆಳಿಗ್ಗೆ 09.00 ರಿಂದ 10.30 ಗಂಟೆಯವರೆಗೆ ನಾನು ತೋರಿಸಿದಂತೆ ಚಾಸಾ-2 ಮತ್ತು 3 ರವರು ಸಮಕ್ಷಮದಲ್ಲಿ ಪೋಲಿಸರು ಸ್ಥಳ ಮಹಜರನ್ನು ಜರುಗಿಸಿರುತ್ತಾರೆ ಎಂದರೆ ಸರಿ. ಸದರಿ ಮಹಜರ ಕಾಲದಲ್ಲಿ ನಾನು ಹಾಜರುಪಡಿಸಿದ ಮೂರು ಕಟ್ಟಿಗೆ ಬಡಿಗೆಗಳು ಮತ್ತು ಹಿಡಿಗೈ ಅಳತೆಯ ಎರಡು ಕಲ್ಲುಗಳನ್ನು ಪೋಲಿಸರು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

**<u>ಪಾಟಿ ಸವಾಲು:- 2 ನೇ ಆರೋಪಿಯ ಪರವಾಗಿ ಶ್ರೀ ಸಿ.ಎಮ್.ಎಚ್ ವಕೀಲರಿಂದ ಃ-</u>**

1. ನಾನು ಮತ್ತು ಆರೋಪಿತರು ಸಂಬಂದಿಕರು ಎಂದರೆ ಸರಿ. 2 ನೇ ಆರೋಪಿಯ ಗಂಡ ಬಸಪ್ಪ ಮತ್ತು ಆತನಿಗೆ ನಾಲ್ಕು ಸಹೋದರರು ಇರುತ್ತಾರೆ ಎಂದರೆ ಸರಿ. ಮಲಘಾಣ ಗ್ರಾಮದ ಬಸ್ ನಿಲ್ದಾಣದ ಹತ್ತಿರ 2 ನೇ ಆರೋಪಿಯ ಗಂಡನಿಗೆ ಸಂಬಂಧಿಸಿದಂತೆ ಒಂದು ನಿವೇಶನ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಬಸಪ್ಪನ ಸಹೋದರನಾದ ಮಹಾದೇವಪ್ಪನಿಂದ ಮಲಘಾಣ ಗ್ರಾಮದ ಬಸ್ ನಿಲ್ದಾಣದ ಹತ್ತಿರ ಇರುವ ನಿವೇಶವನ್ನು ಖರೀದಿಸಿರುತ್ತೇನೆ ಎಂದು ಹೇಳುತ್ತಾರೆ. ನಾನು ಖರೀದಿಸಿದ್ದೇನೆ ಎಂದು ಹೇಳುವ ಜಾಗವು 2 ನೇ ಆರೋಪಿಯ ಗಂಡ ಬಸಪ್ಪನಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. 2 ನೇ ಆರೋಪಿಯ ಗಂಡನು ಮಹಾರಾಷ್ಟ್ರದಲ್ಲಿ ವಾಸವಾಗಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ನಾನು 2 ನೇ ಆರೋಪಿಯ

ಅನುಮತಿಯ ಮೇರೆಗೆ ಬಸಪ್ಪನಿಗೆ ಸಂಬಂಧಿಸಿದ ನಿವೇಶನದಲ್ಲಿ ಪಂಚರ ಅಂಗಡಿಯನ್ನು ನಡೆಸುತ್ತಿರುತ್ತೇನೆ ಎಂದರೆ ಸರಿಯಲ್ಲ. ನಾನು 2ನೇ ಆರೋಪಿಗೆ ಬಾಡಿಗೆ ಹಣವನ್ನು ಕೊಡದೇ ಇರುವುದರಿಂದ 2ನೇ ಆರೋಪಿಯು ತನಗೆ ಜಾಗವನ್ನು ಬಿಟ್ಟುಕೊಡುವಂತೆ ಹಲವಾರು ಬಾರಿ ನನ್ನನ್ನು ಕೇಳಿರುತ್ತಾಳೆ ಎಂದರೆ ಸರಿಯಲ್ಲ. 2ನೇ ಆರೋಪಿಯು ನನಗೆ ಜಾಗವನ್ನು ಬಿಟ್ಟುಕೊಡುವಂತೆ ಹಲವಾರು ಬಾರಿ ಕೇಳಿದ್ದರೂ ಕೂಡಾ ಕೇಳಿಲ್ಲ ಎಂದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಾನು ಮಹಾದೇವಪ್ಪನಿಂದ ಖರೀದಿಸಿರುವ ಕ್ರಯ ಪತ್ರವನ್ನು ಪೋಲಿಸರಿಗೆ ಕೊಟ್ಟಿರುವುದಿಲ್ಲ. ಸಾಕ್ಷಿಯು ಮುಂದುವರೆದು ಸದರಿ ಕ್ರಯ ಪತ್ರವನ್ನು ಪೋಲಿಸರಿಗೆ ತೋರಿಸಿರುತ್ತೇನೆ ಎಂದು ಹೇಳುತ್ತಾರೆ. ನಾನು ಮಹಾದೇವಪ್ಪನಿಂದ ಯಾವುದೇ ಆಸ್ತಿಯನ್ನು ಖರೀದಿಸಿಲ್ಲ ಮತ್ತು ಯಾವುದೇ ಕ್ರಯ ಪತ್ರವನ್ನು ಪೋಲಿಸರಿಗೆ ತೋರಿಸಿಲ್ಲ ಎಂದರೆ ಸರಿಯಲ್ಲ. ನಾನು ಪಂಚರ ಅಂಗಡಿಯನ್ನು ನಡೆಸುತ್ತಿರುವ ಜಾಗವು 2ನೇ ಆರೋಪಿಗೆ ಸಂಬಂಧಿಸಿರುತ್ತದೆ ಎಂದರೆ ಸರಿಯಲ್ಲ.

3. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ನಿಪಿ-1ರ ದೂರಿನಲ್ಲಿ ಏನೂ ಬರೆದಿರುತ್ತಾರೆ ಎಂಬುದು ನನಗೆ ಮಾಹಿತಿ ಇಲ್ಲ ಎಂದರೆ ಸರಿ. ನಿಪಿ-1ರ ದೂರನ್ನು ಪೋಲಿಸರು ಬರೆದಿರುತ್ತಾರೆ. ನನಗೆ ಪೋಲಿಸರು ನಿಪಿ-1ರ ದೂರಿಗೆ ಸಹಿ ಮಾಡುವಂತೆ ಹೇಳಿದ ಮೇರೆಗೆ ನಾನು ನಿಪಿ-1ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ.

4. ನಾನು ಗಲಾಟೆಯನ್ನು ಪ್ರತ್ಯಕ್ಷವಾಗಿ ನೋಡಿರುತ್ತೇನೆ. ಆ ದಿನ ಚಾಸಾ-4 ಮತ್ತು 5ರವರೊಂದಿಗೆ ಗಲಾಟೆ ಮಾಡಲು ಐದು ಜನ ಆರೋಪಿತರು

ಬಂದಿದ್ದರು. ಆರೋಪಿತರು ಚಾಸಾ-4 ಮತ್ತು 5ರವರೊಂದಿಗೆ ಯಾವುದೇ ಗಲಾಟೆಯನ್ನು ಮಾಡಿಲ್ಲ, ಅವರಿಗೆ ಹೊಡೆ ಬಡಿ ಮಾಡಿಲ್ಲ, ಅವರಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಅವರಿಗೆ ಪ್ರಾಣ ಬೆದರಿಕೆ ಹಾಕಿಲ್ಲ ಮತ್ತು ಚಾಸಾ-5ರವರ ಮಾನಕ್ಕೆ ಧಕ್ಕೆಯಾಗುವ ರೀತಿಯಲ್ಲಿ ನಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಗಲಾಟೆಯಾದ ದಿನವೇ ಪೋಲಿಸ್ ಠಾಣೆಗೆ ಹೋಗಿರುತ್ತೇನೆ.

5. ಪೋಲಿಸರು ಗಲಾಟೆಯಾದ ಮರುದಿನವೇ ಪಂಚನಾಮೆ ಮಾಡಲು ಬಂದಿದ್ದರು. ಚಾಸಾ-2 ಮತ್ತು 3ರವರು ನನ್ನ ಸ್ನೇಹಿತರು ಮತ್ತು ನನಗೆ ಬೇಕಾದವರು ಎಂದರೆ ಸರಿಯಲ್ಲ. ಚಾಸಾ-2 ಮತ್ತು 3ರವರು ನನ್ನ ಸ್ನೇಹಿತರು ಮತ್ತು ನನಗೆ ಬೇಕಾದವರು ಇದ್ದರು ಕೂಡಾ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿರುವಂತೆ ಪೋಲಿಸರು ಯಾವುದೇ ಸ್ಥಳ ಪಂಚನಾಮೆಯನ್ನು ಮಾಡಿಲ್ಲ ಮತ್ತು ನಾನು ಹಾಜರುಪಡಿಸಿದ ಮು.ಮಾಲುಗಳನ್ನು ಪೋಲಿಸರು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

6. ಸಾಕ್ಷಿಗೆ ನಿಪಿ-2ರ ಛಾಯಾಚಿತ್ರವನ್ನು ತೋರಿಸಿ, ಸದರಿ ಛಾಯಾಚಿತ್ರದಲ್ಲಿ ಪಂಚರ ಅಂಗಡಿಯನ್ನು ತೋರಿಸುವಂತೆ ಕೇಳಿದಾಗ ಸಾಕ್ಷಿಯು ಮನೆಯ ಪಕ್ಕದಲ್ಲಿ ಇರುತ್ತದೆ ಎಂದು ಹೇಳುತ್ತಾರೆ. ನಿಪಿ-2ರ ಛಾಯಾಚಿತ್ರವನ್ನು ಯಾರು ತೆಗೆದಿರುತ್ತಾರೆ ಎಂಬುದು ನನಗೆ ನೆನಪು ಇರುವುದಿಲ್ಲ. ಸಾಮಾನ್ಯವಾಗಿ ಮು.ಮಾ-1 ರಿಂದ 5 ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ. ಗಲಾಟೆಯಾಗಿದೆ ಎಂದು ಹೇಳುವ ಸ್ಥಳದಲ್ಲಿ ರಕ್ತದ ಕಲೆಗಳು ಇದ್ದವು. ಮು.ಮಾ-1 ರಿಂದ 5ಕ್ಕೆ ಯಾವುದೇ ರಕ್ತದ ಕಲೆಗಳು ಇಲ್ಲ ಎಂದರೆ ಸಾಕ್ಷಿಯು ಸದರಿ ರಕ್ತದ ಕಲೆಗಳು ಇಲ್ಲಿಯವರೆಗೆ ಇರುವುದಿಲ್ಲ ಎಂದು

ಹೇಳುತ್ತಾರೆ. ಚಾಸಾ-4 ರವರ ಅಂಗಿಗೆ ರಕ್ತದ ಕಲೆಗಳು ಆಗಿದ್ದವು. ಚಾಸಾ-4 ರವರ ಅಂಗಿಯನ್ನು ಪೋಲಿಸರಿಗೆ ನಾನು ಕೊಟ್ಟಿರುವುದಿಲ್ಲ. ನನಗೆ 2 ನೇ ಆರೋಪಿಯು ಜಾಗವನ್ನು ಬಿಟ್ಟುಕೊಡುವಂತೆ ನನಗೆ ಹಲವಾರು ಬಾರಿ ಕೇಳಿದ್ದರಿಂದ ನಾನು ಆರೋಪಿತರಿಗೆ ತೊಂದರೆ ಕೊಡಲು ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

1 ನೇ **ಹೆಚ್ಚುವರಿ ಸಿವಿಲ್**
**ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬಸವನ ಬಾಗೇವಾಡಿ.**